

## ಧರ್ಮಸ್ಥಳದಲ್ಲಿ ಗಜಪ್ರಸವ

ಧರ್ಮಸ್ಥಳದಲ್ಲಿ ಒಂದು ಬೆಳಿಗ್ಗೆ 'ಲಕ್ಷ್ಮಿ' ಆನೆ ಹೆಣ್ಣು ಮರಿಗೆ ಜನ್ಮ ನೀಡಿದ್ದಾಳೆ.ತಾಯಿ ಮತ್ತು ಮಗಳು ಆರೋಗ್ಯವಾಗಿದ್ದಾರೆ. ಧರ್ಮಸ್ಥಳದಲ್ಲಿ ನೆಲ್ಯಾಡಿಬೀಡು ಬಳಿ ಇರುವ ಆನೆಗಳ ಶುಶ್ರೂಷಾ ತಾಣದಲ್ಲಿ ತಾಯಿ ಮತ್ತು ಮಗು ವಿಶ್ರಾಂತಿ ಪಡೆಯುತ್ತಿದ್ದಾರೆ.

ಶಾಸಕ ಆನಂದ್ ಸಿಂಗ್ 2009ರಲ್ಲಿ ಲಕ್ಷ್ಮಿಯನ್ನು ಧರ್ಮಸ್ಥಳಕ್ಕೆ ಉಡುಗೊರೆ ನೀಡಿದ್ದರು. ಎರಡು ವರ್ಷಗಳ ಹಿಂದೆ ಬನ್ನೇರುಘಟ್ಟದ ಕಾಡಾನೆ ಸ್ನೇಹಕ್ಕೆ ಲಕ್ಷ್ಮಿಯನ್ನು ಕಳುಹಿಸಲಾಗಿತ್ತು. 20 ತಿಂಗಳ ಗರ್ಭವವನ್ನು ಧರಿಸಿದ್ದ ಆಕೆ ಇತ್ತೀಚೆಗೆ ತಾಯಿಯಾಗಿದ್ದಾಳೆ. ಅವಳ ಬಾಣಂತನವನ್ನು ಅರಣ್ಯ ಇಲಾಖೆಯ ಅಧಿಕಾರಿಗಳು ಮತ್ತು ಧರ್ಮಸ್ಥಳದ ಪಶುವೈದ್ಯಾಧಿಕಾರಿಗಳ ಉಸ್ತುವಾರಿಯಲ್ಲಿ ನಡೆಯುತ್ತಿದೆ.

—ಆರ್.ಎನ್. ಪೂವಣಿ, ಉಜಿರೆ



## ಮಾರ್ಜಾಲ ಸರ್ಕಸ್

ಮನೆಯಲ್ಲಿ ಬೆಕ್ಕಿನ ಮರಿಗಳಿದ್ದರೆ ಅವುಗಳ ಆಟ ನೋಡುವುದೇ ಸೊಗಸು. ಅವುಗಳ ಚೆನ್ನಾಟ ನೋಡುತ್ತಿದ್ದರೆ ಸಮಯ ಹೋಗಿದ್ದೇ ತಿಳಿಯುವುದಿಲ್ಲ. ಈ ಮುದ್ದು ಮರಿಯ ಸರ್ಕಸ್ ನೋಡಿ... ನಾಲ್ಕು ಕಾಲುಗಳಿದ್ದರೂ ಎರಡೇ ಕಾಲಿನಲ್ಲಿ ನಿಂತು ನಡೆಯುವ ಅಭ್ಯಾಸ ಮಾಡುತ್ತಿದೆ. ಬಹುಶಃ ಎರಡು ಕಾಲುಗಳಲ್ಲಿ ನಡೆದಾಡುವ ಮನುಷ್ಯರನ್ನು ನೋಡಿಯೇ ಸ್ಫೂರ್ತಿ ಪಡೆದುಕೊಂಡಿತೋ ಏನೋ! ತನ್ನ ಒಡನಾಡಿಯ ಜೊತೆ ಆಟವಾಡುತ್ತಿದ್ದಾಗ ಎಚ್ಚರಿಕೆಯಿಂದ ಈ ರೀತಿ ನಿಂತು ತನ್ನ ತಾಖತ್ತನ್ನು ತೋರಿಸಿದೆ.

—ರಾಜೇಶ್ವರಿ ರವಿಕಿರಣ್ ಮಯ್ಯ, ಪುತ್ತೂರು

## ಗಾಜಿನ ಹಾದಿ

ನಾವು ನಡೆಯುವ ಹಾದಿಯೆಲ್ಲ ಪಾರದರ್ಶಕವಾಗಿದ್ದು, ಕಾಲಡಿಯ ರುದ್ರ ರಮಣೀಯ ಪ್ರಕೃತಿ ದೃಶ್ಯಗಳೂ ಕಣ್ಣಿಗೆ ಕಾಣುವಂತಿದ್ದರೆ ಹೇಗಿರುತ್ತದೆ? ಆಕಾಶದಲ್ಲಿ ತೇಲಾಡುವ ಅನುಭವ ನೀಡುವಂತಿದ್ದರೆ ಅದೆಷ್ಟು ಸುಂದರ ಅಲ್ಲವೇ? ಈ ಎಲ್ಲ ಅನುಭವ ನೀಡುವ ಗಾಜಿನ ಆಕಾಶ ಮಾರ್ಗ ಸಿಕ್ಕಿಂನ ಪೆಲ್ಲಿಂಗ್ ಎಂಬಲ್ಲಿ ಇದೆ. ಅತ್ಯಂತ ಕಡಿದಾದ ಬೆಟ್ಟದ ತುದಿಯಲ್ಲಿ ಭಗವಾನ್ ಬುದ್ಧನ ಪದತಲದಲ್ಲಿ ಇರುವ ಈ ತಾಣಕ್ಕೆ ಕೋರಿಕೆಯ ಮೇಲೆ ಮೇಲೆ ಅಧಿಕ ಹಣ ಕೊಟ್ಟರೆ ಮಾತ್ರ ಅಲ್ಲಿನ ಚಾಲಕರು ಕರೆದುಕೊಂಡು ಹೋಗುತ್ತಾರೆ. ಗಾಜಿನ ಮಾರ್ಗದಲ್ಲಿ ನಡೆಯುವ ಖುಷಿ ಜೊತೆಗೆ ಅಲ್ಲಿಗೆ ತಲುಪುವ ಮೈ ನವಿರೇಳಿಸುವ ಪ್ರಯಾಣದ ರೋಚಕತೆ ಮಾತ್ರ ಬೆಲೆಕಟ್ಟಲಾಗದ್ದು!

—ವಾ. ಮುರಳೀಧರ, ತೀರ್ಥಹಳ್ಳಿ

